# ಕಿಲುಬು

■ ವಸುಮತಿ ಉಡುಪ

## ಗಿಣಿ ಶಾಸ್ತ್ರದವನ ಮೊರೆ

'ಮೊದ್ಲು ಹುಡುಗಿ ನೋಡೋಕೆ ನನ್ನಂತೋಳು ಹೋಗೋದಾ? ಯಾರಾರೂ ಏನಂದ್ಕಂತಾರೆ?' ಸೊಸೆಯ ಮಾತನ್ನು ತಟ್ಟಿ ಹಾರಿಸಿದ್ದಳು ಅಮ್ಮ. ಪೆಠಾರಿಯಲ್ಲಿ ಜೋಪಾನವಾಗಿಟ್ಟಿದ್ದ ತನ್ನ ರೇಷ್ಮೆ ಸೀರೆಯನ್ನು ಸೊಸೆಗೆ ತೆಗೆದುಕೊಟ್ಟಿದ್ದಳು. ತನ್ನದೇ ಎರಡೆಳೆಯ ಅವಲಕ್ಕಿಸರವನ್ನು ತೊಡಲು ಕೊಟ್ಟಿದ್ದಳು. ಯಾವತ್ತೂ ಕಾಣದ ಅತ್ತೆಯ ಇಂತಾ ಚರ್ಯೆಯಿಂದ ಭವಾನಿಗೆ ಇರಿಸುಮುರಿಸು.

'ಥೋ, ನಂಗೆ ಇದೆಲ್ಲಾ ಭಾರಿ ಭಾರಿ ಅನಿಸುತ್ತೆ. ನಾವೇನು ಮದುವೆ ಮನೆಗೆ ಹೋಗ್ತಿರೋದಾ, ಹುಡುಗಿ ನೋಡೋದಕ್ಕಾ?'

